# ಅಲ್ಲಿದೆ ನಮ್ಮನೆ ..... ಇಲ್ಲಿ ಬಂದೆ ಸುಮ್ಮನೆ !!

**ಡಾ. ಸೈಯದ್ ಮುಯಿನ್**

ಕನ್ನಡ ಸಹಾಯಕ ಪ್ರಾಧ್ಯಾಪಕ

ಕ್ರಿಸ್ತು ಜಯಂತಿ ಕಾಲೇಜು, ಸ್ವಾಯತ್ತ, ಬೆಂಗಳೂರು

syedmuen@kristujayanti.com

ಪ್ರೇಮ ಕವಿ, ಮಲ್ಲಿಗೆಯ ಕವಿ, ದಾಂಪತ್ಯದ ಕವಿ ಒಲುಮೆಯ ಕವಿಯೆಂದು ಕನ್ನಡ ಸಾಹಿತ್ಯದಲ್ಲಿ ಪ್ರಸಿದ್ಧಿಯನ್ನು ಪಡೆದಿರುವ ಕೆ.ಎಸ್. ನರಸಿಂಹಸ್ವಾಮಿ ಅವರು ದಾಂಪತ್ಯದ ಕುರಿತು ಶ್ರೇಷ್ಠ ಕವನಗಳನ್ನು ರಚಿಸಿದ್ದಾರೆ. ಮಧ್ಯಮ ವರ್ಗದ, ಕೆಳವರ್ಗದ ಶ್ರೀಸಾಮಾನ್ಯನ ಕುರಿತಾಗಿ ರಚಿಸಿರುವ ಅದ್ಭುತ ಕವನಗಳು ಎಲ್ಲರನ್ನು ಪ್ರಭಾವಿಸಿರುವುದು, ಆಕರ್ಷಿಸಿರುವುದು ಇತಿಹಾಸವಾಗಿದೆ. ಕೆ.ಎಸ್.ನ ಅವರನ್ನು ಎಂ.ಎನ್.ವ್ಯಾಸರಾವ್ ಮತ್ತು ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಸಂದರ್ಶನ ಮಾಡಿದ್ದ ಸಂದರ್ಭವೊಂದರಲ್ಲಿ ಕನ್ನಡ ಅಧ್ಯಾಪಕರಲ್ಲ, ಸಾಹಿತ್ಯಿಕ ವಿದ್ಯಾರ್ಥಿ ಇಲ್ಲದಿದ್ದ ತಾವು ಕನ್ನಡದಲ್ಲಿ ಇಂತಹ ಶ್ರೇಷ್ಠ ಕವನಗಳನ್ನು ಬರೆಯಲು ಹೇಗೆ ಸಾಧ್ಯವೆಂದು ಕೇಳಿದಾಗ ಕೆಎಸ್‌ನ ಅವರು ನಗುತ್ತ ಇನ್ನೂ ನಾನು ಸಾಹಿತ್ಯಿಕ ವಿದ್ಯಾರ್ಥಿಯೇ ಎಂದು ಹೇಳಿದ್ದರಂತೆ. ಕವನ ಬರೆಯಲು ಅನುಭವ ಮತ್ತು ಪದಸಂಪತ್ತು ಬೇಕೆ ಹೊರತು ಮತ್ತೇನಿಲ್ಲ ಎಂಬುದನ್ನು ಇವರ ಸಾಹಿತ್ಯದ ಮೂಲಕ ಅರ್ಥೈಸಬಹುದಾಗಿದೆ. ಇವರ ಕಾವ್ಯದ ರುಚಿ ಹತ್ತಿದವರಿಗೆ ಕೆ.ಎಸ್.ನ ಅವರ ಪ್ರೇಮ ಕಾವ್ಯವು ಪ್ರೇಮಿಗಳ ಪಾಲಿಗೆ ಭಗವದ್ಗೀತೆ ಎಂದರೆ ತಪ್ಪಾಗಲಾರದು.

ನವೋದಯ ಕಾಲಘಟ್ಟದಲ್ಲಿ ಬರೆಯಲು ಪ್ರಾರಂಭಿಸಿದ ಕವಿ ನವ್ಯದ ಕಾಲಘಟ್ಟದ ನಂತರವೂ ಕವನಗಳನ್ನು ಈ ಸಾಹಿತ್ಯಿಕ ಪ್ರೇರಣೆಗೆ ಒಳಗಾಗಿ ಬರೆದಿರುವುದನ್ನು ಇವರ ಕವನ ಸಂಕಲನಗಳಲ್ಲಿ ಕಾಣಬಹುದಾಗಿದೆ. ನವೋದಯ ಮತ್ತು ನವ್ಯ ಸಾಹಿತ್ಯದ ಪಂಥಗಳಲ್ಲಿ ತಮ್ಮ ಸ್ವಂತಿಕೆಯನ್ನು ಉಳಿಸಿಕೊಂಡ ಧೀಮಂತ ಕವಿ ಕೆಎಸ್‌ನ ಆಗಿದ್ದರು. ನವ್ಯ ಸಾಹಿತ್ಯದ ಪ್ರಭಾವಕ್ಕೆ ಒಳಗಾದ ಇವರು ನವ್ಯದ ಪ್ರತಿಮೆಗಳನ್ನು, ವಾಚ್ಯಾರ್ಥ, ಸೂಚ್ಯಾರ್ಥಗಳನ್ನು ತಮ್ಮ ಕಾವ್ಯದಲ್ಲಿ ಯತೇಚ್ಛವಾಗಿ ಬಳಸಿಕೊಂಡರು, ಅದಕ್ಕೆ ಉತ್ತಮ ಉದಾಹರಣೆ ಮನೆಯಿಂದ ಮನೆಗೆ ಎಂಬ ಕವನವಾಗಿದೆ. ಈ ಕಾವ್ಯವು ಕವಿಯ ಕಾವ್ಯಲೋಕವನ್ನು ವಿಸ್ತಾರಗೊಳಿಸಿದಂತಹ ಮಹತ್ತರ ಕಾವ್ಯವಾಗಿದೆ. ದಾಂಪತ್ಯ, ಪ್ರೇಮ, ಸರಸ–ವಿರಸ, ಮನೆ, ಕುಟುಂಬದ ಸುತ್ತಲೇ ಗಿರಕಿ ಹೊಡೆಯುತ್ತಿದ್ದ ಕವಿ ಕಾವ್ಯ ಲೋಕವು ಅದನ್ನು ದಾಟಿ ಪಾರಮಾರ್ಥಿಕ ಲೋಕದ ಚಿತ್ರಣವನ್ನು ಅತ್ಯಂತ ಅಚ್ಚುಕಟ್ಟಾಗಿ ಕೊಡುವ ಕಾವ್ಯ ಇದಾಗಿದೆ. ತನ್ನ ಕಾವ್ಯದ ಕಾಳಜಿಗಳನ್ನು ಗುರುತಿಸಿಕೊಳ್ಳುತ್ತ, ಬೇರೆ ಮಾಡಿಕೊಳ್ಳುತ್ತ, ವಿಸ್ತರಿಸುತ್ತ, ಸಂಸ್ಕೃತಿಯೊಡನೆ ತನ್ನನ್ನು ತಾನು ಕಂಡುಕೊಳ್ಳುವ ಪ್ರಯತ್ನ ಮಾಡಿರುತ್ತಾರೆ.

ಕೆಎಸ್‌ನ ಅವರ ಮಹತ್ವದ ಕವಿತೆಗಳಲ್ಲಿ 'ಮನೆಯಿಂದ ಮನೆಗೆ' ಒಂದಾಗಿದೆ. ಇಲ್ಲಿ ಸಾವು ಕೇಂದ್ರ, ನವ್ಯ ಸಾಹಿತ್ಯದಲ್ಲಿ ಸಾವನ್ನು ವೈಭವೀಕರಿಸುವ ಅಂಶಗಳನ್ನು ಈ ಕವಿತೆಯಲ್ಲಿ ಕಾಣಬಹುದಾಗಿದೆ. ಸಾವು ಜೀವನದ ಕೇಂದ್ರ ವಸ್ತು, ಸಾವನ್ನು ಗುರಿಯಾಗಿಟ್ಟುಕೊಳ್ಳುವ, ಬದುಕಿನಲ್ಲಿ ಅದರ ಅಸ್ತಿತ್ವವನ್ನು ಮನಗಾಣುವಿಕೆಯನ್ನು ಈ ಕವಿತೆ ಕಟ್ಟಿಕೊಡುವ ಕೆಲಸ

ಮಾಡುತ್ತದೆ. ಸಾಮಾನ್ಯ ದಿನಚರಿಯಂತೆ ಕಾಣುವ ಪದ್ಯದ ಸಾಲುಗಳು ಜೀವನದ ಅನಂತ ಸತ್ಯವನ್ನು ಬಯಲಿಗೆಳೆಯುವ ಪ್ರಯತ್ನವನ್ನು ಮನಗಾಣಬಹುದಾಗಿದೆ. ಮನುಷ್ಯ ವಿಕಾಸಪಥದಲ್ಲಿ ಭೂಮಿ–ಮನುಷ್ಯ–ದೈವ ಈ ಸಂಬಂಧದ ಸ್ವರೂಪವನ್ನು ಈ ಕವಿತೆ ಬಹುವಾಗಿ ಚರ್ಚಿಸುವಂತಹದ್ದು.

ಬಸವಣಾದಿ ಶರಣರು ಮಾನವ ಶರೀರವನ್ನು ದೇವಾಲಯಕ್ಕೆ, ಜಂಗಮ ಸ್ವರೂಪಕ್ಕೆ ಹೋಲಿಸಿದ್ದರೆ, ಶಿಶುನಾಳ ಶರೀಫರು ತಮ್ಮ ತತ್ವಪದಗಳಲ್ಲಿ ಮಾನವ ದೇಹವನ್ನು ಗುಡಿಗೆ, ಮನೆಗೆ ಹೋಲಿಸಿರುವುದನ್ನು ಕಾಣಬಹುದು. ಪುರಂದರದಾಸರ ಕೀರ್ತನೆಯೊಂದರಲ್ಲಿ ಲೌಕಿಕ ಜಗತ್ತನ್ನು ಕಳ್ಳಮನೆ, ಸುಳ್ಳುಮನೆ ಎಂದೆಲ್ಲಾ ಸೂಚಿಸುತ್ತ ಲೌಕಿಕ ಆಸೆಗಳನ್ನು ತೊರೆದು ದಿವ್ಯ ಬದುಕಿನ ಮನೆಗೆ ಸಾಗುವ ಕ್ರಿಯೆಗಳನ್ನು ಕಾಣಬಹುದು. ಅದೇ ಕೆಎಸ್‌ನ ಅವರು ಲೌಕಿಕ ಮನೆಯನ್ನು 'ಹೊರಮನೆ'ಯೆಂಬ ಪದವನ್ನು ಬಳಸಿದ್ದಾರೆ. ಹೊರಮನೆಯೆಂಬುದು ಬಹಿರಂಗವನ್ನು, ದೇಹವನ್ನು ಸೂಚಿಸುವಂತಹದ್ದಾಗಿದೆ. ಕುವೆಂಪು ಅವರ ಅನಿಕೇತನ ಎಂಬ ತತ್ವವನ್ನು ಪ್ರತಿಪಾದಿಸಿದರೆ, ಕೆಎಸ್‌ನ ಅವರು ಇಲ್ಲದಿರುವ, ಕಲ್ಪನಾತೀತವಾದ ಮನೆಯ ವರ್ಣನೆಯನ್ನು ಮಾಡಿರುವುದನ್ನು ಮನನ ಮಾಡಿಕೊಳ್ಳಬಹುದು. ಸಾವು ಮುಕ್ತಿಯ ಸಂಕೇತ, ಬದುಕಿನ ಜಂಜಾಟಗಳಿಂದ, ನೋವು, ಪರದಾಟಗಳಿಂದ ಮುಕ್ತನಾಗುವ ಕ್ರಿಯೆ, ಸುಖ, ದುಖಗಳು ಶಾಶ್ವತವಲ್ಲ ಆದರೆ ಸಾವು ಶಾಶ್ವತವಾದುದು, ಸಾವು ಲೌಕಿಕ ಜಗತ್ತಿಗೆ ವಿದಾಯ ಮತ್ತು ಹೊಸ ಜಗತ್ತಿನಲ್ಲಿ ಹೊಸ ಜೀವನಕ್ಕೆ ಸ್ವಾಗತವನ್ನು ಒಳಗೊಂಡಿರುತ್ತದೆ. ಇನ್ನೂ ಒಂದು ವಿಷಯವಂತು ನಿಶ್ಚಿತ, ವಯಸ್ಸು ಅಥವಾ ಹೊರಡುವ ವಿಧಾನ ಏನೇ ಇರಲಿ, ಸಾವು ಅಪರೂಪವಾಗಿ ಏಕಾಂಗಿಯಾಗಿ ಅನುಭವಿಸುವ ಅನುಭವವಾಗಿದೆ.

ಉರ್ದು ಶಾಯರ್ ಒಬ್ಬ ಹೇಳುವ ಹಾಗೆ "ಕೌನ್ ಇಸ್ ಘರ್ ಕಿ ದೇಖ್ ಭಾಲ್ ಕರೇ, ರೋಜ್ ಏಕ್ ಚೀಜ಼್ ಟೂಟ್ ಜಾತಿ ಹೈ (ಯಾರು ಈ ಮನೆಯನ್ನು ನಿರ್ವಹಿಸುವರು, ಪ್ರತಿ ದಿನ ಒಂದಲ್ಲ ಒಂದು ವಸ್ತುಗಳು ನಾಶವಾಗುತ್ತಿರುತ್ತವೆ.) ಇಲ್ಲಿ ಮಾನವ ದೇಹವನ್ನು ಮನೆಗೆ ಹೋಲಿಸಲಾಗಿದೆ. ಸಾವು ಅನಿವಾರ್ಯ, ಆದರೆ ನಿಗೂಢ ಘಟನೆಯಾಗಿದೆ. ಸಾವಿನ ಬಗ್ಗೆ ಕಲ್ಪನೆ ಮತ್ತು ಜ್ಞಾನವನ್ನು ಪಡೆಯಲು ಸಾಹಿತ್ಯವೂ ಒಂದು ಮಾರ್ಗವಾಗಿದೆ. ಸಾವು ಎಂಬ ವಿಷಯವು ಸಾಹಿತ್ಯಕ್ಕೆ ತುಂಬಾ ಪ್ರಭಾವಯುಕ್ತವಾಗಿದೆ, ಏಕೆಂದರೆ ಇದು ನಿಗೂಢ ವಿಷಯದ ಬಗ್ಗೆ ಚರ್ಚೆ ಮತ್ತು ನಿರೂಪಣೆಗಳಲ್ಲಿ ಭಾವನಾತ್ಮಕ ಪರಿಣಾಮಗಳನ್ನು ಮುಖ್ಯವಾಗಿ ಸೃಷ್ಟಿಸುತ್ತದೆ. ಸಾವಿನ ಕುರಿತಾದ ಸಾಹಿತ್ಯವು ನಮ್ಮ ಜೀವನಕ್ಕೆ ಅಸ್ತಿತ್ವವಾದದ ಪ್ರಾಮುಖ್ಯತೆಯನ್ನು ಮನಗಾಣಿಸುತ್ತದೆ. ಸಾಹಿತ್ಯವು ಸಾವಿನೊಂದಿಗೆ ಕಾಲ್ಪನಿಕ ಸಂಘರ್ಷಗಳನ್ನು ಒದಗಿಸುತ್ತವೆ, ಸಾವು ಮತ್ತು ಜೀವನ ಎರಡಕ್ಕೂ ಅರ್ಥವನ್ನು ನೀಡುತ್ತವೆ. ಹೀಗಾಗಿ, ಸಾಹಿತ್ಯದಲ್ಲಿ ಸಾವು ದೈಹಿಕ ಅಥವಾ ಮಾನಸಿಕ ಅನುಭವಕ್ಕಿಂತ ಹೆಚ್ಚು; ಇದು ಮಾನವೀಯತೆ ಮತ್ತು ವಿಷಯ ಪ್ರಸ್ತಾವನೆಯ ಹೇಳುವಿಕೆಗೆ ಸಂಬಂಧಿಸಿದಂತೆ ಅಸ್ತಿತ್ವವಾದದ ಪ್ರಶ್ನೆಗಳನ್ನು ಎತ್ತಿ ತೋರಿಸುತ್ತದೆ.

ಸಾವಿನ ಕುರಿತು ವಿಶ್ಲೇಷಣೆಯನ್ನು ಮಾಡಿದವರಾರು ಸಾವನ್ನು ಅನುಭವಿಸಿದವರಲ್ಲ, ಆದರೆ ಕಾಲನರಮನೆಗೆ ಪರಕಾಯ ಪ್ರವೇಶ ಮಾಡಿದವರೇ ಆಗಿದ್ದಾರೆ. ಸಾವು ಎಂದರೆ ನಾಶ, ಲಯ, ವಿಲಯ, ಪ್ರಳಯ, ವಿಚ್ಛಿದ್ರ, ನಶ್ವರ, ಶೂನ್ಯ ಮೊದಲಾದ ಕಳಕೊಂಡ ಭಾವಗಳನ್ನು ಚಿತ್ರಿಸುತ್ತವೆ ಎನ್ನುವ ಸಾಹಿತಿಗಳು ಸಾವನ್ನು ಗೆಲ್ಲುವ ಹುಚ್ಚುತನ ಜೀವರಲ್ಲಿ

ಮೊಳಕೆಯೊಡೆಯುವ ಪರಿಯನ್ನು ಗುರುತಿಸುತ್ತಾರೆ. ಸಾವನ್ನು ಗೆಲ್ಲುವುದು ಎಂದರೆ ಸಾವಿನಾಚೆಯ ಬದುಕಿನ ಹಂಬಲ, ಅದರ ಸಾವಿನ ಬಗೆಗೆ ದಾಸರು, ಶರಣರು, ಆಧುನಿಕ ಕವಿಗಳು ಅಭಿವ್ಯಕ್ತಿಸಿದ್ದಾರೆ. ಸಾವೆಂದರೆ ಜಡ, ಸ್ಥಾವರ, ಜಂಗಮತ್ವ ಅಳಿದುದು, ಅಚಲ, ಸ್ಥಿರ, ಹೀಗೆ ಚೇತನ ಕಳೆದುಕೊಂಡದ್ದು ಎಂಬುದಾಗಿದ್ದರು ಸಾವು ಅಂತ್ಯವಲ್ಲ, ಹೊಸ ಜೀವನದ ಪ್ರಾರಂಭವೆಂತಲೂ ಸಾಹಿತಿಗಳು ತಮ್ಮ ಕಲ್ಪನೆಗಳಲ್ಲಿ ಬಣ್ಣಿಸಿದ್ದಾರೆ.

ಸಾಧನಾರಹಿತವಾದ ಬದುಕು ಸಾವಿಗೆ ಸಮನೆಂದೇ ಹಲವು ಸಾಹಿತಿಗಳ ನಂಬಿಕೆಯೂ ಹೌದು. ಸಾವು ಹೇಗಿರಬಹುದು? ಅದನ್ನು ಅನುಭವಿಸಿ ಹೇಳುವುದು ಸಾಧ್ಯವಿಲ್ಲ. ಸಾಯುವವರ ಬಾಹ್ಯ ಯಾತನೆಯನ್ನು ಮಾತ್ರ ಬಣ್ಣಿಸಬಹುದು. ಸಾವಿನ ಕುರಿತು ಯಾವುದೇ ಬಣ್ಣನೆ ಇದ್ದರೂ ಅದು ಕಲ್ಪನೆಯದು ಮತ್ತು ಪ್ರತಿಮಾರೂಪದ್ದು. ಸಾವೆಂದರೆ ಪಾತಾಳದ ಬಿಲಕ್ಕೆ ಬಾಗಿಲಿನಂತೆ ಎಂದು ಪಂಪ ಹೇಳಿದ್ದಾನೆ. ಆಧುನಿಕ ಕಾಲದವರು ಪಾತಾಳ ಎಂದರೇನು ಎಂದು ಪ್ರಶ್ನಿಸಬಹುದು. ಹೇಳದೆ ಕೇಳದೆ ಬಂದೆರಗುವ ಸಾವಿನ ರೀತಿಯಿಂದಲೇ ಅದರ ಬಗ್ಗೆ ಎಲ್ಲರಿಗೂ ಒಂದು ಅಳುಕು ಇರುತ್ತದೆ. ಹಾಗಾದರೆ ಸಾಹಿತಿಗಳ, ತತ್ವಶಾಸ್ತ್ರಜ್ಞರ, ಆಧ್ಯಾತ್ಮ ಸಾಧಕರ ಪ್ರಕಾರ ಸಾವೆಂದರೆ ಏನು? ಗತಿಶೀಲವಾದ ದೇಹಕ್ಕೆ ತಟಕ್ಕನೆ ತಟಸ್ಥ ಸ್ಥಿತಿಯೊಂದನ್ನು ಕಲ್ಪಿಸಿಕೊಡುವ ಪ್ರಗತಿಶೀಲ ಅದು. ಆತ್ಮ, ದೇಹಗಳ ಪ್ರತ್ಯೇಕತೆಯೇ ಜೀವಿಯ ಸಾವು, ಅಳಿವು, ಕೊನೆ, ಅಂತ್ಯ ಎಂದು ಹೇಳಬಹುದು. ಎಲ್ಲಾ ಧರ್ಮಗಳೂ ಹೇಳುವುದೊಂದೇ ಆತ್ಮ ದೇಹಗಳು ಒಂದಾಗಿದ್ದರೆ ಜೀವ. ಅವೆರಡೂ ಬೇರೆಯಾದರೆ ಸಾವು. ಅನೈಕ್ಯತೆಯೇ ಸಾವು. ಶರೀರದ ನಶ್ವರತೆಯನ್ನು ಆತ್ಮದ ಅಮರತ್ವವನ್ನು ಕುರಿತು ಸಾಹಿತ್ಯದಲ್ಲಿ ಏನೇನು ಕಲ್ಪನೆಗಳಿವೆ, ಆಲೋಚನೆಗಳಿವೆ ಎಂಬುದನ್ನು ಹಲವು ಸಾಹಿತ್ಯಿಕ ಕೃತಿಗಳಲ್ಲಿ, ಧಾರ್ಮಿಕ ಸಾಹಿತ್ಯದಲ್ಲಿ ಕಾಣಬಹುದು. ಮಾನವನ ಪ್ರತಿ ರೋಮ ರೋಮವು ಜೀವಂತಿಕೆಯ ಸಂಕೇತ, ಇದಕ್ಕೆ ಸಾವೆರಗಿದಾಗ ಮಾನವ ದೇಹದ ಪ್ರತಿ ಅಂಗವು ಅಸಹನೀಯ ನೋವನ್ನು ಅನುಭವಿಸುತ್ತದೆ. ಬರೀ ಸಾವಷ್ಟೇ ಅಲ್ಲ, ಜನಪದ ನಂಬಿದ ಸಾವಿನ ಸಂಕೇತಗಳು ಕೂಡ ಕಾವ್ಯಕೃತಿಗಳಲ್ಲಿ ಪ್ರತಿಮೆಗಳಾಗಿ ಮೆರೆಯುತ್ತವೆ. ಕೋಣ, ಯಮರಾಜ, ಪಾಶ, ಚಿತ್ರಗುಪ್ತ, ಪಂಚಭೂತ, ಮಸಣ, ಚಟ್ಟ, ಮಡಿಕೆ, ಚಿತೆ, ಅಸ್ಥಿ ಹೀಗೆ ಸಾವಿನ ಸುತ್ತಾ ಹೆಣೆದುಕೊಳ್ಳುವ ಪರಿಕರಗಳೆಲ್ಲ ಸಾಹಿತ್ಯದಲ್ಲಿ ಅನಾವರಣಗೊಳ್ಳುತ್ತವೆ. ಏಕೆಂದರೆ ಇದು ಎಲ್ಲರಿಗೂ ತಿಳಿದಿರುವ ಮತ್ತು ಯಾರೂ ಅನುಭವಿಸದ ವಿಷಯ. ಮನುಷ್ಯ ಸದ ಪ್ರಕೃತಿಯ ವಿರುದ್ಧ ಹೋರಾಡುತ್ತಿರುತ್ತಾನೆ, ಸಾವಿನ ಬಗ್ಗೆ ಚಿಂತನೆ ನಡೆಸಲು ಹೆದರುತ್ತಾನೆ. ಸಾವು ಇತರ ದುರಂತಗಳ ಜೊತೆಗೆ ಜಿಜ್ಞಾಸೆ ಮತ್ತು ಉತ್ತೇಜನಕಾರಿಯಾದುದಾಗಿದೆ. ಜನರು ಸಾಮಾನ್ಯವಾಗಿ ಸಂಕೀರ್ಣ ಸಂಬಂಧಗಳು, ಲೈಂಗಿಕತೆ, ಸಂಘರ್ಷ, ಹೋರಾಟ ಮತ್ತು ಸಾವುಗಳನ್ನು ಒಳಗೊಂಡಿರುವ ಸಾಹಿತ್ಯವನ್ನು ಆಕರ್ಷಕವಾಗಿ ಕಾಣುತ್ತಾರೆ. ರೋಮಿಯೋ ಮತ್ತು ಜೂಲಿಯೆಟ್, ಹ್ಯಾಮ್ಲೆಟ್ ಮತ್ತು ಮ್ಯಾಕ್ಬೆತ್‌ನಂತಹ ನಾಟಕಗಳನ್ನು ಬರೆದಾಗ ಶೇಕ್ಸ್ಪಿಯರ್ ಕೂಡ ಇದನ್ನು ಅರ್ಥಮಾಡಿಕೊಂಡಿದ್ದನು. ಸಂಕ್ಷಿಪ್ತವಾಗಿ ಹೇಳುವುದಾದರೆ, ಸಾವು ಓದುಗರ ಮನಸ್ಸನ್ನು ಹಿಡಿದಿಡುತ್ತದೆ.

ಜಗತ್ತಿನ ಎಲ್ಲಾ ಮಹಾನ್ ವಿಷಯಗಳು ಮಾನವ ಜೀವನದ ರಹಸ್ಯಗಳು ಮತ್ತು ಭಾವೋದ್ರೇಕಗಳನ್ನು ಪ್ರತಿಬಿಂಬಿಸುತ್ತವೆ: ಜನನ, ಪ್ರೀತಿ, ಕುಟುಂಬ, ಆಘಾತ–ಪ್ರತಿಘಾತಗಳು, ಅಡೆತಡೆಗಳು, ಕಳೆದುಹೋದ ವಸ್ತುಗಳು, ಕಂಡುಕೊಂಡ ವಸ್ತುಗಳು, ಹೇಡಿತನ ಮತ್ತು ಶೌರ್ಯ, ಬುದ್ಧಿವಂತಿಕೆ ಮತ್ತು ಅಜ್ಞಾನ, ಅದೃಷ್ಟ, ನತದೃಷ್ಟ ಮತ್ತು ... ಸಾವು!

ಹೌದಲ್ಲವೇ ಸಾವು ಎಲ್ಲಕ್ಕಿಂತ ದೊಡ್ಡ ರಹಸ್ಯವಲ್ಲವೇ? ಅನಾದಿ ಕಾಲದಿಂದಲೂ ಸಾವಿನಾಚೆಗೆ ಏನಿದೆ ಎಂಬುದಕ್ಕೆ ಮನುಕುಲವು ಉತ್ತರವನ್ನು ಹುಡುಕಲಿಲ್ಲವೇ? ಹುಡುಕುತ್ತಲೇ ಇದೆ. ಸಾವು ಅಥವಾ ಪರಲೋಕದ ಜ್ಞಾನ ಅಥವಾ ಅನುಭವ, ಮೃತ್ಯುವಿನ ಬಗೆಗಿನ ಚಿಂತನೆಗಳು ವೈದಿಕ ಯುಗದಿಂದಲೂ ಉಪಲಬ್ಧಿತವಾಗುತ್ತವೆ. ಆದರೆ ಅಧಿಕಾಂಶ ಭಾರತೀಯ ತತ್ವಶಾಸ್ತ್ರವು ಮಾನವನ ಮೃತ್ಯುವನ್ನು ಸಹಜ ರೂಪದಲ್ಲಿ ಸ್ವೀಕರಿಸಲು ಒತ್ತು ನೀಡುತ್ತದೆ. ವೇದಗಳಲ್ಲಿ ಉಲ್ಲೇಖಿತ ಚತುರಾಶ್ರಮಗಳಲ್ಲಿ ಅಂತಿಮವಾಸ ಸಂನ್ಯಾಸವು ಸಾವಿನ ಪರಿಚಯವೇ ಆಗಿದೆ. ಮೃತ್ಯುವಿನ ಎದುರಲ್ಲಿ ಮನುಷ್ಯ ಅಸಹಾಯಕ, ಆದ್ದರಿಂದ ಮೃತ್ಯುವನ್ನು ಸಹಜರೂಪದಲ್ಲಿ ಸ್ವೀಕರಿಸಿ ಆತ್ಮಸಮರ್ಪಣೆಯ ಹೊರತು ಅನ್ಯ ಮಾರ್ಗಗಳಲ್ಲಿ, ಅನ್ಯ ಉಪಾಯಗಳಿಲ್ಲ.

ಸಾವಿನ ಬಗೆಗೆ ಚಿರಂತನ ಜಿಜ್ಞಾಸಾ ಪ್ರತಿ ಮಾನವ ಮನದಲ್ಲಿ ಹೊಯ್ದಾಡುತ್ತಿರುತ್ತದೆ. ಸಾವೆಂದರೇನು? ಸಾವಿನ ನಂತರ ಏನಾಗುತ್ತದೆ ಎಂಬೆಲ್ಲಾ ಪ್ರಶ್ನೆಗಳು ಪ್ರತಿಯೊಬ್ಬರಿಗೂ ಕಾಡುತ್ತದೆ. ಮನುಷ್ಯನ ಸಮಸ್ತ ಜೀವನದಲ್ಲಿ ಮೃತ್ಯು ಭಯ ಸದಾ ಕಾಡುತ್ತಿರುತ್ತದೆ. ಮೃತ್ಯುವಿನಿಂದ ಆದಷ್ಟು ಓಡುವ ವ್ಯರ್ಥ ಪ್ರಯತ್ನವನ್ನು ಮಾನವ ಮಾಡುತ್ತಿರುತ್ತಾನೆ. ಒಬ್ಬ ವಿದ್ವಾಂಸ ಸರಿಯಾಗಿ ಹೇಳಿದ್ದಾನೆ:– ನಾವು ಆಹಾರ ಸೇವನೆ ಮಾಡುತ್ತೇವೆ, ಏಕೆಂದರೆ ಆಹಾರ ಸೇವನೆ ಮಾಡದಿದ್ದರೆ ಮೃತ್ಯುವಿನ ದರ್ಶನ ಮಾಡಬೇಕಾಗುತ್ತದೆ, ನಾವು ಪರಿವಾರದಲ್ಲಿ ವಾಸಿಸುತ್ತೇವೆ, ಮದುವೆಯಾಗುತ್ತೇವೆ ಮಕ್ಕಳು ಮರಿಗಳನ್ನು ಹಡೆಯುತ್ತೇವೆ ವೃದ್ಧರಾದಾಗ ನಮ್ಮನ್ನು ನೋಡಿಕೊಳ್ಳಲು ಯಾರಾದರು ಇರಬೇಕೆಂಬ ಭಯದಿಂದ, ಮೃತ್ಯುವಿನ ಭಯದಿಂದ. ಅಂದರೆ ಮಾನವನಿಗೆ ಹುಟ್ಟಿನಿಂದ ಸಾಯುವವರೆಗೂ ಮೃತ್ಯು ಭಯ ಕಾಡುತ್ತಿರುತ್ತದೆ ಎಂಬುದಂದು ಸ್ಪಷ್ಟವಾಗಿದೆ. ಫ್ರಾಯ್ಡ್‌ನ ಮನಃಶಾಸ್ತ್ರೀಯ ಅಧ್ಯಯನಗಳು ಮೃತ್ಯುವಿನ ಬಗೆಗಿನ ವಿಚಾರಗಳ ಅವಧಾರಣೆಗಳ ಸ್ಪಷ್ಟವಾಗಿ ನೀಡಲಾಗಿದೆ. ಫ್ರಾಯ್ಡ್ ಮಾನವನ ಅವಚೇತನ ಮನದ ಸ್ಥಿತಿಯ ಮೂರು ಪ್ರವೃತ್ತಿಗಳ ಉಲ್ಲೇಖ ಮಾಡುತ್ತಾನೆ–ಅಹಂ, ಭಯ ಮತ್ತು ಲೈಂಗಿಕತೆ. ಈತ ಮಾನವನ ಎರಡು ಪ್ರವೃತ್ತಿಗಳಾದ ಕಾಮ ಮತ್ತು ಮೃತ್ಯು ಬೋಧೆಯನ್ನು ಹೆಚ್ಚು ಪ್ರಬಲವಾದುದೆಂದು ನಂಬಿದ್ದರು. ಇದಕ್ಕೆ ಸಂಬಂಧಿಸಿದಂತೆ ಇವರ ವಿಚಾರಗಳು ಹೀಗಿವೆ:– Freud now believed that there were two sets of drives: the libidinal drives, called Eros (after the Greek god of Love) and the death instinct, which readers soon called Thanatos (after the Greek God of Death) the death instinct is the tendency for life to regular to an intimate state. The instinct for self-preservation, formerly the reality principle, is a part of the death instinct, for it resists death as the result of external cause. ಮೃತ್ಯುಗೆ ಸಂಬಂಧಿಸಿದಂತೆ ಭಾರತದ ವಿಚಾರಗಳಾದ ನಚಿಕೇತೋಪಾಖ್ಯಾನ, ಮಹಾಭಾರತದ ಭೀಷ್ಮ ಪರ್ವ, ಭಗವದ್ಗೀತೆ ಮುಂತಾದವಲ್ಲಿ ಲಭ್ಯವಿದೆ. ಇವುಗಳಲ್ಲೆಲ್ಲಾ ಮೃತ್ಯುವನ್ನು ಸಹಜವಾಗಿ ಸ್ವೀಕರಿಸಲು ಬೋಧಿಸಲಾಗಿದೆ. ಇದಕ್ಕೆ ವಿಪರೀತವಾಗಿ ಪಾಶ್ಚಾತ್ಯರಲ್ಲಿ ಮೃತ್ಯು ಒಂದು ಪ್ರಶ್ನೆಯಾಗಿ ಉದ್ಭವಿಸುತ್ತದೆ. ಮೃತ್ಯು ಪಾಶ್ಚಾತ್ಯರಿಗೊಂದು ಸವಾಲು, ಇಪ್ಪತ್ತನೇಯ ಶತಮಾನದ ನಂತರ ಪಾಶ್ಚಾತ್ಯರಲ್ಲಿ ಮೃತ್ಯುವಿನ ಬಗೆಗಿನ ಚಿಂತನೆಯ ಪರಿಣಾಮವಾಗಿ ಅಸ್ತಿತ್ವವಾದ ಮುನ್ನಡೆಗೆ ಬಂದಿತು.

ಪುರಂದರದಾಸರ ಕೆರೆಯ ನೀರು ಕೆರೆಗೆ ಚೆಲ್ಲಿ ಎಂಬ ದಾಸಪದದ ಈ ಸಾಲು ತ್ಯಾಗಜೀವನದ ಪ್ರತೀಕವಾಗಿದೆ. ತನಗಾಗಿ ಬದುಕದೆ ಇತರರಿಗಾಗಿ ಬದುಕುವ ಪಾಠವನ್ನು ಹೇಳುತ್ತದೆ. ಹಸು ತನ್ನ ಹಾಲನ್ನು ತಾನು ಕುಡಿಯುವುದಿಲ್ಲ. ಮರ ತನ್ನ ಹಣ್ಣು ತಾನೇ ತಿನ್ನುವುದಿಲ್ಲ. ಕೆರೆ ತನ್ನ ನೀರನ್ನು ತಾನೇ ಕುಡಿಯುವುದಿಲ್ಲ. ಇವೆಲ್ಲ ನಮಗೆ ನಿತ್ಯ ಬೋಧೆಗಳು. ಇವುಗಳಿಂದ ಕಲಿಯುವ ಪಾಠವೇ ಭೂತಾಯಿ ಕೊಟ್ಟ ಕಾಣಿಕೆಗಳನ್ನು ಭೂಮಿತಾಯಿಗೇ ವಾಪಸ್ ಕೊಡುವುದು. ಎಲ್ಲಿಂದ ಬಂದಿದ್ದೇವೋ ಅಲ್ಲಿಗೆ ಸಾಗುವುದು, ಹೇಗೆ ಬಂದಿದ್ದೇವೆಯೋ ಹಾಗೇ ಸಾಗಬೇಕು ಎನ್ನುವುದು ಪ್ರಮುಖ ಸಂಗತಿಯಾಗಿದೆ. ಈ ಕವನದಲ್ಲಿ ಕೆರೆಯ ನೀರು ಕೆರೆಗೆ ಚೆಲ್ಲಿ ಎನ್ನುವ ಪದ ಬಳಸಿರುವುದು ಮೇಲೆ ಹೇಳಿದ ಹಾಗೆ ಜೀವನದ ತ್ಯಾಗವನ್ನು ಒತ್ತಿ ಹೇಳುತ್ತಿರುವುದು ಅಂದರೆ ಮನೆ ಖಾಲಿ ಮಾಡಲು ಮನೆ ಮಾಲೀಕ ಮಾಡಿದ ಕೆಲಸವೇನು ಎಂದರೆ ವಿದ್ಯೆ ಹತ್ತದ ತಮ್ಮ ಮಗಳಿಗೆ ಸಂಗೀತ ಹೇಳಿಕೊಟ್ಟದ್ದು, ಆಕೆ ಕಲಿತದ್ದು ಒಂದೇ ಚರಣ ಅದು 'ಕೆರೆಯ ನೀರು ಕೆರೆಗೆ ಚೆಲ್ಲಿ' ಅಂದರೆ ಲೌಕಿಕ ಜೀವನದಲ್ಲಿ ಬಂದು ಹೋಗಿರುವ ನೂರಾರು ಸಾಧು ಸಂತರು, ತತ್ವಜ್ಞಾನಿಗಳು, ಅನುಭಾವಿಗಳು ಹೇಳಿರುವ ನಿತ್ಯ ಚಿರಂತನ ಸತ್ಯದ ಅರಿವಾಗಿ ದೇಹ ತ್ಯಾಗ ಮಾಡುವುದು, ಪರಲೋಕದ ಸಿದ್ಧತೆಗೆ ತೊಡಗುವುದನ್ನು ಸೊಗಸಾಗಿ ಚಿತ್ರಿಸಿದ್ದಾರೆ.

ಕಾವ್ಯವನ್ನು ಓದುವ ರೀತಿ ತುಂಬಾ ಮುಖ್ಯವಾದುದಾಗಿದೆ. ಕಾವ್ಯವೊಂದು ಸರಳವಾಗಿ ಅರ್ಥವಾಗಿ, ಸರಳ ರೀತಿಯಲ್ಲಿ ವ್ಯಾಖ್ಯಾನಕೊಂಡರೆ ತನ್ನ ಮಹತ್ವವನ್ನು ಕಳೆದುಕೊಳ್ಳುತ್ತದೆ. ಹಾಗೆಯೇ ಕಾವ್ಯವು ಪ್ರತಿ ಓದಿನಲ್ಲೂ, ಪ್ರತಿಯೊಬ್ಬರಿಗೂ ಹೊಸ ಅರ್ಥ, ಹೊಸ ವ್ಯಾಖ್ಯಾನವನ್ನು ನೀಡುವುದರ ಮೂಲಕ ತನ್ನ ಮಹತ್ವವನ್ನು ಉಳಿಸಿಕೊಳ್ಳುತ್ತದೆ. ಕಾವ್ಯ ಪ್ರಯೋಜನದ ಪ್ರಶ್ನೆಯನ್ನು ಈ ಕವನದಲ್ಲಿ ಗಮನಿಸಿದಾಗ ಮಾನವ ಕುಲ ಆದಿಕಾಲದಿಂದಲೂ ಎತ್ತಿದ ಪ್ರಶ್ನೆಗೆ ಉತ್ತರವೆಂಬಂತೆ ಈ ಕವನ ಉತ್ತರ ನೀಡುತ್ತದೆ. ಇಹಲೋಕದ ಆಸೆಗಿಂತ ಪರಲೋಕದ ಸಿದ್ಧತೆಯ ಬಗ್ಗೆ, ಮಾನವ ಬೆಳೆಸಿಕೊಳ್ಳಬೇಕಾದ, ಮಾನವ ಸಮಾಜಕ್ಕೆ ಅನಿವಾರ್ಯವಾಗಿ ಬೇಕಾದ ಸದ್ಗುಣಗಳ ಪ್ರಯೋಜನದ ಬಗ್ಗೆ ಒತ್ತಿ ಹೇಳಲಾಗಿದೆ. ಕೆಎಸ್‌ನ ಅವರ ಈ ಕಾವ್ಯವು ಆಧ್ಯಾತ್ಮಿಕ, ತತ್ವಶಾಸ್ತ್ರದ ಹಿನ್ನೆಲೆಯಲ್ಲಿ ಗಮನಿಸುವುದು ಅವಶ್ಯಕವಾಗಿದೆ. ಮನೆಯೆನ್ನುವುದು ಸ್ಥಿರಪ್ರಜ್ಞೆಯನ್ನು ಬಿಂಬಿಸುತ್ತದೆ, ಆ ಕಾರಣಕ್ಕಾಗಿಯೇ ಇಲ್ಲಿ ಬಾಡಿಗೆ ಮನೆಯನ್ನು ಸೂಚ್ಯಾರ್ಥವಾಗಿ ಬಳಸಲಾಗಿದೆ. ಕೆಲಕಾಲ ಉಳಿದು/ವಾಸ್ತವ್ಯ ಹೂಡಿ ಬೇರೆ ಮನೆಯ ಹುಡುಕಾಟಕ್ಕೆ ಸಿದ್ಧಗೊಳ್ಳುವ ಜೀವಿಗಳ ಚಿರಂತನ ಸತ್ಯದ ನಿತ್ಯ ಹುಡುಕಾಟವನ್ನು ಕಾಣಬಹುದು. ಮನೆಯಲ್ಲಿರುವ ನಿರುಪಯುಕ್ತ, ಹಾಳಾಗಿರುವ ವಸ್ತುಗಳು ನಮ್ಮಲ್ಲಿರುವ ದುರ್ಗುಣಗಳ ಬಗ್ಗೆ, ಕಾಮನೆ, ಲಂಪಟತನ ಮೊದಲಾದವುಗಳ ಬಗ್ಗೆ ವಿವರಿಸಿದ್ದಾರೆ. "ತಿರುಪಿರದ ಲಾಂದ್ರಗಳು, ತಳವಿರದ ಗೂಡೆಗಳು, ಜರಡಿ, ತೊಟ್ಟಿಲು, ಒನಕೆ"... ತಿರುಪಿರದ ಲಾಂದ್ರವು ತನ್ನ ಚಾಲಕ ಶಕ್ತಿಯನ್ನು ಕಳೆದುಕೊಂಡಿರುವ ವಸ್ತುವು ಚೈತನ್ಯರಹಿತ ವ್ಯಕ್ತಿತ್ವದ ಪ್ರತೀಕವಾಗಿ, ಜೀವನಸೆಲೆಯನ್ನು ಕಳೆದುಕೊಂಡ ಸ್ಥಾವರ ದೇಹವನ್ನು ಇಲ್ಲಿ ಪ್ರತೀಕವಾಗಿ ನೀಡಿರುವುದನ್ನು ಕಾಣಬಹುದು. ಹರಿದಿರುವ ಚಾಪೆ ತನ್ನ ಸಂಪೂರ್ಣತೆಯನ್ನು ಕಳೆದುಕೊಂಡಿರುವುದನ್ನು, ಸವಕಲು ಜೀವವನ್ನು ಸೂಚಿಸುತ್ತದೆ. ಈ ವಸ್ತುಗಳು/ಗುಣಗಳನ್ನು ಎಲ್ಲರ ಮುಂದೆ ಪ್ರದರ್ಶಿಸುವಂತಹದ್ದಲ್ಲ, ಯಾರೂ ನೋಡದ ಹಾಗೆ, ರಾತ್ರಿಯಲ್ಲಿ ಸಾಗಿಸುವ ಕಾರ್ಯ ಮಾಡಲು ಸೂಚಿಸಿದ್ದಾರೆ. ತಮ್ಮಲ್ಲಿರುವ ಕೊಳಕು ಸ್ವಭಾವವನ್ನು ಇತರರಿಗೆ ಪ್ರದರ್ಶಿಸಲು ಹಿಂದ್ಲೇಟಾಗುವ ಜನರ ಭಾವನೆಗಳನ್ನು ಇಲ್ಲಿ ನೆನೆಸಿಕೊಳ್ಳಸಬಹುದು.

ಹೊರಮನೆಯಿಂದ ಹೊರಮನೆಗೆ ಎನ್ನುವ ಪದವು ಮಾನವ ಬದಲಿಸುವ ಶರೀರಗಳ ಬಗೆಗೆ ಸೂಚ್ಯಾರ್ಥವನ್ನು ನೀಡಲಾಗಿದೆ. ಧಾರ್ಮಿಕ ನಂಬಿಕೆಗಳ ಪ್ರಕಾರ ಮಾನವನ ಕರ್ಮಗಳು ಆತನ ಪಾರಮಾರ್ಥಿಕ ಜೀವನವನ್ನು ನಿರ್ಧರಿಸುತ್ತವೆ, ಆತನು ಸತ್ಕರ್ಮಿಯಾಗಿದ್ದರೆ ವೈತರಣೀ ನದಿಯನ್ನು ದಾಟಿ ಮುಕ್ತಿಯನ್ನು ಪಡೆಯುತ್ತಾನೆ, ದುಷ್ಕರ್ಮಿಯಾಗಿದ್ದರೆ ಭವಾಂತರಗಳಲ್ಲಿ ಸಿಲುಕಿ ಒದ್ದಾಡಬೇಕಾಗುತ್ತದೆ. ಭವದಲ್ಲೇ ಶರೀರಗಳನ್ನು ಬದಲಾಯಿಸಿ ಬದುಕುವುದನ್ನು ಹೊರಮನೆಯಿಂದ ಹೊರಮನೆಯೆಂಬುದಾಗಿ ಬಳಸಿದ್ದಾರೆ. ಹೊರಮನೆಯಿಂದ ಹೊರಮನೆಗೆ ಹೋಗಬೇಕಾದಾಗ ಒಳಮನೆಯನ್ನು ಶುಭ್ರಗೊಳಿಸುವುದು ಕಡ್ಡಾಯವಾಗಿರುತ್ತದೆ, ಆದರೆ ಇದನ್ನು ಮಾಡುವವರಾರು? ಎಂಬುದು ಬಹುಮುಖ್ಯ ಪ್ರಶ್ನೆಯಾಗಿದೆ.

ಮನೆಯಿಂದ ಮನೆಗೆ, ಹೊರಮನೆಯಿಂದ ಹೊರಮನೆಗೆ
ಮೊದಲ ಮನೆಯಿಂದ
ಆದರವಿರದ, ಕದವಿರದ, ಹೆಸರಿರದ ಇನ್ನೊಂದು ಮನೆಗೆ
ಹೊಸತು ಹಳೆಯದು ಎಲ್ಲ ಯಾತ್ರೆ ಹೊರಟಿದ್ದೇವೆ.
ಅಲ್ಲಿ ತಡೆಯುವವರಿಲ್ಲ,
ಒಳಗೆ ಕರೆಯುವವರಿಲ್ಲ,
ಇನ್ನೊಂದು ಮನೆಯಿಲ್ಲ
ಹೊರಮನೆಯ ನೆರಳಿಲ್ಲ
ಹೋದವರು ಹಿಂದಿರುಗಿ ಬರಲು ಹಾದಿಗಳಿಲ್ಲ;
ಅದೇ ಕಡೆಯ ಮನೆ!
ಬಾಂದಳದ ತಾರೆಗಳ ಓರೆಗಣ್ಣಿನ ಕೆಳಗೆ ಆಗಾಗ ಬೀಸುವುದು ಬಯಲ ಗಾಳಿ.

ಪದ್ಯದ ಕೊನೆ ಚರಣಗಳು ಇಡೀ ಪದ್ಯದ ಭಾವಾಥವನ್ನು ಓದುಗರ ಮುಂದಿಟ್ಟು ಬಿಡುತ್ತದೆ. ಮೇಲಿನ ಪದ್ಯ ಭಾಗದ ಸಾಲುಗಳಲ್ಲಿ ಚಿತ್ರಿತವಾಗಿರುವ ಮನೆಯು ನಮ್ಮ ಅಂತಿಮ ಮನೆಯದ್ದಾಗಿದೆ, ಅದೇ ನಮ್ಮ ಸಮಾಧಿ, ಗೋರಿ, ಒಂದೇ ಗೋರಿಯಲ್ಲಿ ನೂರಾರು ವ್ಯಕ್ತಿಗಳನ್ನು ಮಣ್ಣು ಮಾಡಿರುವರು, ಒಬ್ಬರು ಸೇರಿದ ಮನೆಗೆ ಮತ್ತೊಬ್ಬ ಸೇರುವನು. ಎಲ್ಲಾ ವಯೋಮಾನದವರು ಈ ಯಾತ್ರೆ ಕೈಗೊಳ್ಳಬೇಕಿರುವುದು ಅನಿವಾರ್ಯ. ಸಾವಿನ ಮನೆಗೆ ಪ್ರವೇಶ ಮಾಡುವವರನ್ನು ತಡೆಯುವವರಿಲ್ಲ, ಮನೆಗೆ ಬಂದ ಅತಿಥಿಗಳನ್ನು ಗೌರವದಿಂದ ಕರೆದು ಆದರ ಮಾಡುವವರು ಯಾರೂ ಇಲ್ಲ, ಇರುವುದೊಂದೇ ಖಾಯಂ ಮನೆ ಇದು. ಯಾವ ಮನೆಯ ಹಂಗಿಲ್ಲದೆ ಇರುವ ಮನೆ, ಒಮ್ಮೆ ಸಾವಿನ ಮನೆ ಪ್ರವೇಶಿಸಿದ ನಂತರ ಮತ್ತೆ ಹಿಂದಿರುಗುವ ಯಾವ ಮಾರ್ಗಗಳಿಲ್ಲ, ಅದೇ ಕಡೆಯ ಮನೆ, ಮಸಣವೆಂಬ ಬಯಲಿನಲ್ಲಿ ಆಕಾಶ ತುಂಬ ಹಬ್ಬಿರುವ ಕೋಟ್ಯಾಂತರ ತಾರೆಗಳ ಬೆಳಕಿನಲ್ಲಿ ಬೀಸುವ ತಣ್ಣನೆಯ ಗಾಳಿಯನ್ನು ಅನುಭವಿಸುವುದನ್ನು ಒತ್ತಿ ಹೇಳಿದ್ದಾರೆ. ಸತ್ತ ವ್ಯಕ್ತಿಯ ಆತ್ಮ ಪರಮಾತ್ಮನೆಡೆಗೆ ಸಾಗುವ, ತನ್ನ ಸಾರ್ಥಕತೆಯನ್ನು, ಮುಕ್ತಿಯನ್ನು ಪಡೆದುಕೊಳ್ಳುವುದನ್ನು ಕೊನೆಯ

ಸಾಲುಗಳಲ್ಲಿ ಕಾಣಬಹುದು. 'ಹೆಸರಿರದ ಇನ್ನೊಂದು ಮನೆಗೆ ಹೊಸತು ಹಳೆಯದು ಎಲ್ಲ ಯಾತ್ರೆ ಹೊರಟಿದ್ದೇವೆ' ಎನ್ನುವ ಮಾತು ಆಧ್ಯಾತ್ಮಿಕ ಹುಟುಕಾಟವನ್ನು ಸೂಚಿಸುವಂತಹದ್ದಾಗಿದೆ. ಜೀವನದ ಕೊನೆಯಲ್ಲಿ ಹೊಸಬರು ಮತ್ತು ಹಳಬರು ಎಂಬ ಯಾವುದೇ ಭೇದ ಭಾವವಲ್ಲದೆ ಎಲ್ಲಾ ಜೀವರಾಶಿಗಳೂ ಆದರವಿರದ, ಹೆಸರಿರದ, ಕದವಿರದ ಇನ್ನೊಂದು ಮನೆಗೆ ಹೋಗಲೇಬೇಕಾಗುತ್ತದೆ. ಅದೇ ಕಡೆಯ ಮನೆಯಾಗಿದೆ. ತನ್ನ ಜೀವಿತ ಕಾಲದಲ್ಲಿ ಜೀವರಾಶಿಗಳು ಎಲ್ಲಿಯೇ ಹೊರಟರು ಕೊನೆಗೆ ಒಂದು ಶಾಶ್ವತ ಮನೆಯನ್ನು ಮುಟ್ಟಬೇಕಾಗುತ್ತದೆ ಎಂಬ ಜೀವನ ಸತ್ಯವನ್ನು ತಿಳಿಸಲು ಕವನ ಪ್ರಯತ್ನಿಸಿದೆ.

**ಆಕರ ಗ್ರಂಥ**

೧.ಮೈಸೂರು ಮಲ್ಲಿಗೆ : ಕೆ.ಎಸ್.ನರಸಿಂಹಸ್ವಾಮಿ, ಸ್ಟಾಂಡರ್ಡ್ ಬುಕ್ ಕಂಪನಿ, ಬೆಂಗಳೂರು, ೨೦೧೪